ಬೆವರುತ್ತಿದ್ದಳು ಸಂಧ್ಯಾ.

‘ಹೊಡೀಬೇಡ ಕಣೇ, ಹೊಡೀಬೇಡ್ವೇ ಪುಣ್ಯಾತ್ಗಿತ್ತಿ...’ ವಹಿಸಿಕೊಂಡರೆ ಮಗಳ ಕೋಪ ಪರಾಕಾಷ್ಠೆಗೇರುತ್ತಿತ್ತು. ಅದೇನೋ ಚೈಲ್ಡ್ ಸೈಕಾಲಜಿ ಅಂತೆ. ಒಬ್ಬರು ಹೊಡೆದಾಗ, ಬೈದಾಗ ಮತ್ತೊಬ್ಬರು ವಹಿಸಿಕೊಂಡು ಬರಬಾರದಂತೆ.

‘ನೀನು ಸುಮ್ನಿರು ಅಮ್ಮಾ, ನೀನೇ ತಲೇಮೇಲೆ ಏರಿಸಿ ಕೂರಿಸ್ಕೊಂಡಿದ್ದು...’ ಮಂಗಳಾರತಿಯಾಗುತ್ತಿತ್ತು ಸಂಧ್ಯಾಳಿಗೆ. ಕೊನೆ ಕೊನೆಗಂತೂ ಮಗಳು ವಾರಕ್ಕೊಮ್ಮೆ ಬರುವುದಕ್ಕಿಂತ ಬರದಿದ್ದರೇ ನಿಶ್ಚಿಂತೆಯಾಗಿರಬಹುದು ಅನಿಸತೊಡಗಿ ತನ್ನ ಮನೋಸ್ಥಿತಿಗೆ ತಾನೇ ಬೆಚ್ಚಿ ಬಿದ್ದಿದ್ದಳು ಸಂಧ್ಯಾ. ‘ಹಲ್ಲು ಲೆಕ್ಕ ಮಾಡಿಕೊಂಡಿದ್ದು’ ಅನ್ನುತ್ತಾರಲ್ಲ, ಥೇಟ್ ಹಾಗೇ, ಮೊಮ್ಮಗ ಅಜ್ಜಿಯ ದೌರ್ಬಲ್ಯನ್ನು ಪತ್ತೆ ಮಾಡಿಕೊಂಡುಬಿಟ್ಟಿದ್ದ. ಜೋರಾಗಿ ಅತ್ತರೆ, ಕಿರುಚಿದರೆ, ಕಾಲು ಬಡಿದು ರಂಪ ಮಾಡಿದರೆ ಬಗ್ಗಿ ಬಿಡುತ್ತಾಳೆ ಸಂಧ್ಯಾ. ವಾರಕ್ಕೊಮ್ಮೆ ಹಾಜರಾಗುವ ಹೆತ್ತವರೆದುರು ತೋರಿಸದ ಚೇಷ್ಟೆ, ಕೀಟಲೆ, ರಗಳೆಗಳಿಗೆಲ್ಲಾ ಅಮ್ಮಮ್ಮನೆದುರು ಮುಕ್ತ ಅವಕಾಶ. ‘ಬೇಕು’ ಅಂದಿದ್ದು ಬೇಕು. ಅವನು ಹೇಳಿದ ತಿಂಡಿ, ಅವನು ಕೇಳಿದ ವಸ್ತು, ಮನೆಯಲ್ಲಿ ಅವನೇ ಸರ್ವಾಧಿಕಾರಿ. ಅವನ ಕೈಯಲ್ಲಿ ಸಿಕ್ಕಿ ಹಾಳಾದ ವಸ್ತುಗಳೆಷ್ಟೋ. ಸಂಧ್ಯಾನ ಮೊಬೈಲನ್ನು ನೀರಿನ ಬಕೆಟ್ಟಿನಲ್ಲಿ ಮುಳುಗಿಸಿಟ್ಟವನು, ಕುಕ್ಕರಿನ ವೈಟನ್ನು ಹಿತ್ತಲ ಗಿಡದ ಬುಡದಲ್ಲಿ ಹೂತಿಟ್ಟವನು, ಪೊರಕೆಕಡ್ಡಿಗಳನ್ನೆಲ್ಲಾ ಎಳೆದೆಳೆದು ಬಾಣ ಮಾಡಿ ಬಿಡುತ್ತಿದ್ದವನು, ಸೋಫಾದ ಮೇಲೆ ಹತ್ತಿ ಹಾರಿ ಕುಣಿಯುತ್ತಿದ್ದವನು, ದಿಂಬನ್ನು ಎಸೆದಾಡಿ ಮುದ್ದೆ ಮಾಡಿಟ್ಟವನು, ತರಕಾರಿ ಹೆಚ್ಚಿಕೊಡುತ್ತೇನೆಂದು ಕೈಲಿದ್ದ ಚಾಕು ಕಸಿಯುತ್ತಿದ್ದವನು, ಚಪಾತಿಹಿಟ್ಟನ್ನು ಲಟ್ಟಿಸಲು ಬರುತ್ತಿದ್ದವನು, ಮಾಡುವ ಪ್ರತಿ ಕೆಲಸದಲ್ಲೂ ಕೈಕಾಲಿಗೆ ತೊಡರಿಕೊಳ್ಳುತ್ತಾ ಬೈಸಿಕೊಳ್ಳುತ್ತಿದ್ದವನು, ಇಟ್ಟ ವಸ್ತುವನ್ನು ಇಟ್ಟಲ್ಲಿ ಇರಗೊಡದೆ ಚೆಲ್ಲಾಡುತ್ತಿದ್ದವನು, ಮನೆ ತುಂಬಾ ಕಾಲಿಡಲು ಜಾಗವಿಲ್ಲದಂತೆ ಆಟದ ಸಾಮಗ್ರಿ ಹರಡಿಕೊಂಡಿರುತ್ತಿದ್ದವನು, ಮಧ್ಯಾಹ್ನದ ಹೊತ್ತು ಅರೆಗಳಿಗೆ ನಿದ್ರಿಸಲು ಬಿಡದೆ ಮೈಮೇಲೆ ಬೀಳುತ್ತಾ ಓಹ್, ಹೇಳುತ್ತಾ ಹೋದರೆ ಹನುಮಂತನ ಬಾಲ. ಈಗಿನ ಮಕ್ಕಳಿಗೆ ಯಾರೂ ಹೇಳಿಕೊಡದೆ ಏನೆಲ್ಲಾ ಕಲಿತುಬಿಡುತ್ತಾರೆ ಎಂದು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಷ್ಟು ಆಶ್ಚರ್ಯವಾಗುತ್ತದೆ ಸಂಧ್ಯಾನಿಗೆ. ಅದು ಹೇಗೋ ಅಜ್ಜನ ಮೊಬೈಲ್‌ನೊಂದಿಗೆ ಮೊಮ್ಮಗನ ನಂಟು ಬೆಳೆದು,

‘ಮಾರಾಯ್ರೇ, ಅನ್ನಿಸ್ಕೊಳ್ಳೋದು ನಾನು. ಹೊಸ ವಿದ್ಯೆ ಕಲಿಸಿಡ್ಬೇಡಿ’ ಸಂಧ್ಯಾ ಅಲವತ್ತುಕೊಂಡಿದ್ದಳು.

‘ನಾನೆಲ್ಲಿ ಕಲಿಸ್ದೆ? ಅವನೇ...’

‘ಬರಲಿ ನಿಮ್ಮ ಮಗಳು. ಮತ್ತೊಂದು ರಾಮಾಯಣ ಉಂಟು...’

ಆಗಿತ್ತು ರಾಮಾಯಣ ಮತ್ತು ಉಳಿದ ಆಪಾದನೆಗಳನ್ನೆಲ್ಲಾ ನುಂಗಿಕೊಂಡಂತೆ ಇದನ್ನೂ ನುಂಗಿಕೊಂಡಿದ್ದಳು ಸಂಧ್ಯಾ. ‘ಒಂದಷ್ಟು



ಹೊತ್ತು ಸುಮ್ನೆ ಕೂತಿದ್ರೆ ಸಾಕಪ್ಪಾ...’ ಎನ್ನುವ ಅಸಹಾಯಕತೆಯ ಪರಮಾವಧಿಯಲ್ಲಿ ಮಕ್ಕಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಡುವ ದುರ್ಭರ ಗಳಿಗೆಯ ಅನುಭವ ಮಗಳಿಗೆಲ್ಲಿತ್ತು?

ಸಂಜೆ ಹೊತ್ತು ಮೊಮ್ಮಗನನ್ನು ಸೊಂಟಕ್ಕೇರಿಸಿಕೊಂಡು ಗೇಟಿನ ಬಳಿ ನಿಂತರೆ ಒಂಟಿಯಾಗಿ, ಜಂಟಿಯಾಗಿ ಗಾಳಿಸೇವನೆಗೆ ಹೊರಟ ಹೆಮ್ಮಕ್ಕಳು. ಸನಿಹದ ದೇವಸ್ಥಾನಕ್ಕೆ ಹೋಗಿ ಸಹಸ್ರನಾಮ ಹೇಳಿಕೊಳ್ಳುವ ಇಳಿವಯಸ್ಸಿನವರು. ಬೀರುವಿನಲ್ಲಿ ಜೋಡಿಸಿಟ್ಟ ತನ್ನ ಸೀರೆಗಳು ಗಾಳಿಯಾಡದೆ ಮುಗ್ಗಲಾಗುತ್ತಿವೆ. ಎಲ್ಲರಂತೆ ತನಗೆ ಯಾವಾಗ ಸಿಗುತ್ತೆ ಸ್ವಾತಂತ್ರ್ಯ ಎನ್ನುವ ಕನವರಿಕೆ. ಮೊಮ್ಮಗನ ಆರೈಕೆಯಲ್ಲಿ ಆಗಿದ್ದಕ್ಕಿಂತಲೂ ಹತ್ತು ವರ್ಷ ಹೆಚ್ಚಾದ ಅನಿಸಿಕೆ. ಏರುಜವ್ವನದಲ್ಲಿ ಒಬ್ಬಳೇ ಮಗಳನ್ನು ಹೆತ್ತು ಸಾಕಿದ್ದು ಯಾವಾಗಲೋ ಮರವೆಗೆ ಸಂದಿತ್ತು. ಈಗ ಮತ್ತದೇ ಚಕ್ರ ಹಿಮ್ಮುಖವಾಗಿ ತಿರುಗಿದೆ. ವ್ಯತ್ಯಾಸ ಒಂದೇ, ಆಗ ದೇಹ, ಮನಸ್ಸುಗಳಲ್ಲಿ ತುಂಬಿಕೊಂಡಿದ್ದ ಉತ್ಸಾಹ, ಹರೆಯದ ಹುಮ್ಮಸ್ಸು ಈಗ ಬೇಸಿಗೆಯ ತೊರೆಯಂತೆ ಬತ್ತಿ ಹೋಗಿ, ಉಳಿದುಕೊಂಡಿರುವುದೊಂದೇ, ಕರ್ತವ್ಯಪ್ರಜ್ಞೆ.

***

ಮಗಳು, ಅಳಿಯನಿಗೆ ಪ್ರಮೋಷನ್ ಟ್ರಾನ್ಸ್‌ಫರ್. ದೂರದ ದೆಹಲಿಗೆ. ಅವನೊಂದು ಶಾಖೆ, ಇವಳು ಮತ್ತೊಂದು.

‘ಪಾಪೂನ ಕರ್ಕೊಂಡ್ಹೋಗ್ತೀವಿ ಅಮ್ಮಾ, ಹೇಗೂ ದೊಡ್ಡ ಆಗಿದಾನೆ. ಪ್ರಿಸ್ಕೂಲ್‌ಗೆ ಸೇರಿಸಿ’.

ಸಿಡಿಲು ಹೊಡೆದಷ್ಟು ಆಘಾತವಾಗಿತ್ತು ಸಂಧ್ಯಾಳಿಗೆ. ಇಂಥದ್ದೊಂದು ನಿರೀಕ್ಷೆ ಇದ್ದೇ ಇತ್ತು. ಆದರೆ ನಿರೀಕ್ಷೆ ವಾಸ್ತವವಾದಾಗ ಎಲ್ಲಾ ಕಳೆದುಕೊಂಡ ಶೂನ್ಯಭಾವ. ‘ಬಿಟ್ಟು ಹೋಗೇ’ ಅಂದಿದ್ದಳು ಸಂಧ್ಯಾ ಗದ್ಗದಿತಳಾಗಿ.

‘ವಾರಕ್ಕೊಮ್ಮೆ ಬರೋಕಾಗುತ್ತೇನಮ್ಮಾ?’ ಕೇಳಿದ್ದಳು ಮಗಳು ಅಸಹಾಯಕತೆಯಿಂದ. ಅಮ್ಮನ ಮನಸ್ಸನ್ನು ಅರ್ಥೈಸಿಕೊಂಡ ಒದ್ದೆ ದನಿಯಿಂದ.

‘ನನ್ನ ಬಿಟ್ಟು ಅಪ್ಪ, ಅಮ್ಮನ ಜೊತೆ ಹೋಗ್ತೀಯೇನೋ?’ ಮೊಮ್ಮಗನನ್ನು ಬಿಗಿದಪ್ಪಿ ಸಂಧ್ಯಾ ಅಶ್ರುಭರಿತಳಾದರೆ, ಅವನಿಗೆ ಅವನದ್ದೇ ಲೋಕ.

‘ಹೋಗ್ತೀನಿ...’ ಅನ್ನುತ್ತಾ ಕುಣಿದಾಡಿತ್ತು ಮಗು. ಚುರುಕ್ಕೆಂದಿತ್ತು ಸಂಧ್ಯಾಳ ಮನಸ್ಸು. ಈ ಪುಟ್ಟ ಹೃದಯಕ್ಕೆ ಅಗಲಿಕೆಯ ಯಾವ ನೋವೂ ಕಾಡುತ್ತಿಲ್ಲವೇ? ಪಾಪ ಮಗು. ಅದಕ್ಕೇನು ಗೊತ್ತಾದೀತು?

***

ಮನೆಯಿಡೀ ಆವರಿಸಿರುವ ಗವ್ವೆನ್ನುವ ಮೌನ. ಸ್ಮಶಾನ ಮೌನ? ಛೇ, ಅನಿಷ್ಟದ ಹೋಲಿಕೆ ಸಲ್ಲದು. ಅಸ್ತವ್ಯಸ್ತವಾಗಿ ಕಳ್ಳ ಗೂರಾಡಿದಂತಿರುತ್ತಿದ್ದ ಮನೆ ಅಚ್ಚುಕಟ್ಟಿಗೆ ಹೊಂದಿಕೊಳ್ಳಲು ಏದುಸಿರು ಬಿಡುವಂತೆ ಕಾಣುತ್ತಿದೆ, ಥೇಟ್ ಈ ಅಮ್ಮಮ್ಮನಂತೆ. ಪ್ರೀತಿ ಮತ್ತು ಅಸಹಾಯಕತೆ ಒಟ್ಟೊಟ್ಟಿಗೆ ಬೆಸೆದುಕೊಂಡ ಸಂಬಂಧ ಅಂದರೆ ಇದೇ ಅಲ್ಲವೇ? ಮನದ ಪ್ರೀತಿಗೆ ಸಹಕರಿಸುವಷ್ಟು ಚೈತನ್ಯ ಜೀವಕ್ಕೆ ಇಲ್ಲ. ಆದರೆ ಆ ಚೈತನ್ಯವನ್ನು ಕೃತಕವಾಗಿಯಾದರೂ ಆವಾಹಿಸಿಕೊಳ್ಳಬೇಕಾದ ಅನಿವಾರ್ಯತೆ ಬದುಕಿನ ಅಪರಿಹಾರ್ಯ ಪರಿಸ್ಥಿತಿಗಳ ಕೊಡುಗೆ. ಮೊಮ್ಮಗನ ಮೇಲಿನ ಸಿಟ್ಟು, ಅಪರೂಪದ ಪೆಟ್ಟು, ಗದರಿಕೆ ಎಲ್ಲವೂ ಅಸಹಾಯಕತೆಯ ಹೊರ ಹರಿವಾಗಿತ್ತೇ ವಿನಾ ಸಹಜ ಪ್ರಕ್ರಿಯೆಯಲ್ಲ. ಪ್ರತಿಯೊಂದರ ಹಿಂದೆಯೂ ಇರುತ್ತಿತ್ತು ನಂತರದ ಪಶ್ಚಾತ್ತಾಪ.

ಸಂಧ್ಯಾ ಕಣ್ಣೀರು ವರೆಸಿಕೊಂಡಳು. ಇಷ್ಟು ವರ್ಷ ತನ್ನ ಇನ್ನೊಂದು ಜೀವ ಅನ್ನುವಂತೆ ಹೃದಯಕ್ಕಪ್ಪಿಕೊಂಡು ಸಾಕಿದ್ದ ಮಗು ಹೊರಡುವ ಹೊತ್ತಲ್ಲಿ ಅದರ ಕಿಂಚಿತ್ ಪ್ರಜ್ಞೆಯೂ ಇಲ್ಲದೆ ಸಂಭ್ರಮದಿಂದ ಕೈಯಾಡಿಸಿ ಹೊರಟುಬಿಟ್ಟಿತಲ್ಲ? ಒಮ್ಮೆ ಅವನು ಕೈ ನೀಡಿ ‘ಅಮ್ಮಮ್ಮಾ...’ ಎಂದು ಅತ್ತಿದ್ದರೆ, ‘ನೀನೂ ಬಾ...’ ಎಂದು ಹಟ ಮಾಡಿದ್ದರೆ, ಸಣ್ಣದೊಂದು ಆತ್ಮತೃಪ್ತಿ ಇರುತ್ತಿತ್ತಾ? ಇರಬಹುದೇನೋ.

ಪ್ರತಿಕ್ರಿಯಿಸಿ: **feedback@sudha.co.in**